# ಥೆಫ್ಟ್ ಪ್ರೊಟೆಕ್ಷನ್‌ಗೆ ಬಲ

**ಮೊಬೈಲ್ ಹಾಗೂ ಅದರ ದುರ್ಬಳಕೆಯು ಹೆಚ್ಚುತ್ತಲೇ ಇದ್ದು, ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಗೂಗಲ್‌ನ ಆ್ಯಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಗೆ (ಆ್ಯಂಡ್ರಾಯ್ಡ್ ಒಎಸ್) ಹೊಸ ಅಪ್‌ಡೇಟ್ ತಂದಿದೆ.**

■ **ಶಶಿಕುಮಾರ್ ಸಿ.**

ಮೊಬೈಲ್ ಕಳ್ಳತನವಾದರೆ ಅಥವಾ ಕಳೆದು ಹೋದರೆ ಆತಂಕ ಆಗುವುದು ಸಹಜ. ಬೆಲೆಬಾಳುವ ಮೊಬೈಲ್ ಜೊತೆಗೆ ಅದರೊಳಗೆ ಇರುವ ಮಹತ್ವದ ಡೇಟಾ, ವಿಡಿಯೊಗಳು, ಫೋಟೊಗಳು ದುರುಪಯೋಗವಾಗುತ್ತವೆ ಎನ್ನುವ ಚಿಂತೆ ಬೇರೆ. ತನ್ನ ಬಳಕೆದಾರರ ಈ ಚಿಂತೆಯನ್ನು ನಿವಾರಿಸಲು ಮುಂದಾಗಿರುವ ಆ್ಯಂಡ್ರಾಯ್ಡ್ ಒಎಸ್, ತನ್ನ ಥೆಫ್ಟ್ ಪ್ರೊಟೆಕ್ಷನ್ ಫೀಚರ್‌ಗೆ ಇನ್ನಷ್ಟು ಬಲ ತುಂಬಿದೆ.

ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ನಲ್ಲಿ ಅನುಮಾನಾಸ್ಪದ ಚಟುವಟಿಕೆ ಕಂಡು ಬಂದರೆ ಥೆಫ್ಟ್ ಪ್ರೊಟೆಕ್ಷನ್ ಕೂಡಲೇ ಎಚ್ಚರಿಕೆ ವಹಿಸುತ್ತದೆ. ನಿಮ್ಮ ಸಾಧನದಲ್ಲಿನ ಡೇಟಾಗೆ ರಕ್ಷಣೆ ಒದಗಿಸುತ್ತದೆ. ಇದರಿಂದ




ಮೊಬೈಲ್ ಕಳ್ಳತನವಾದರೆ ಅಥವಾ ಕಳೆದು ಹೋದರೆ ಆತಂಕಪಡುವ ಅಗತ್ಯವಿರುವುದಿಲ್ಲ. ಫೋನ್ ಇರುವ ಜಾಗವನ್ನೂ ಇದು ಸುಲಭವಾಗಿ ಗುರುತಿಸುತ್ತದೆ. ಆ್ಯಂಡ್ರಾಯ್ಡ್‌ನ ಹೊಸ ಅಪ್‌ಡೇಟ್‌ನಲ್ಲಿ ಈ ಫೀಚರ್ ಲಭ್ಯವಾಗಲಿದೆ.

ಈ ಫೀಚರ್ ಬಳಕೆದಾರರ ಅರಿವಿಗೆ ಬಾರದೆ ನಡೆಯುವ ಅನುಮಾನಾಸ್ಪದ ಚಲನವಲನಗಳ ಬಗ್ಗೆ ಎಚ್ಚರಿಕಾ ಸಂದೇಶವನ್ನು ರವಾನಿಸುತ್ತದೆ. ಆ್ಯಂಡ್ರಾಯ್ಡ್ 10 ವರ್ಷನ್ ನಂತರದ ಸಾಧನಗಳಿಗೆ ಈ ಫೀಚರ್ ಲಭ್ಯವಿರಲಿದ್ದು, ಬಳಕೆದಾರರು ಸೆಟ್ಟಿಂಗ್ಸ್‌ಗೆ ಹೋಗಿ ಥೆಫ್ಟ್ ಪ್ರೊಟೆಕ್ಷನ್ ಆನ್ ಮಾಡಬಹುದು. ಗೂಗಲ್‌ನ ಎಲ್ಲಾ ಸೇವೆಗಳ ಟ್ಯಾಬ್ ಆದ ಪರ್ಸನಲ್ ಅಂಡ್ ಡಿವೈಸ್ ಸೇಫ್ಟಿ ವಿಭಾಗದಲ್ಲಿಯೂ (ಗೂಗಲ್ ಸರ್ವಿಸಸ್ ಪೇಜ್–ಆಲ್ ಸರ್ವಿಸಸ್ ಟ್ಯಾಬ್–ಪರ್ಸನಲ್ ಅಂಡ್ ಡಿವೈಸ್ ಸೇಫ್ಟಿ) ಇದನ್ನು ಆ್ಯಕ್ಟಿವೇಟ್ ಮಾಡಬಹುದು.

### ಥೆಫ್ಟ್ ಡಿಟೆಕ್ಷನ್ ಲಾಕ್

ಗೂಗಲ್ ಎಐ ಭಾಗವಾಗಿ ಕಾರ್ಯನಿರ್ವಹಿಸುವ 'ಥೆಫ್ಟ್ ಡಿಟೆಕ್ಷನ್ ಲಾಕ್' ಫೀಚರ್ ಶಕ್ತಿಶಾಲಿಯಾಗಿದ್ದು, ಮೊಬೈಲ್ ಕಳ್ಳತನವಾದಾಗ ಅಥವಾ ಕಳೆದು ಹೋದಾಗ ನೆರವಿಗೆ ಬರುತ್ತದೆ. ಘಟನೆ ಸಂಭವಿಸಿದ ತಕ್ಷಣವೇ ನಿಮ್ಮ ಫೋನ್‌ನ ಸ್ಕ್ರೀನ್ ಲಾಕ್ ಆಗುತ್ತದೆ. ಬೇರೆಯವರು ಯಾವುದೇ ಡಾಟಾವನ್ನು ಬಳಸದಂತೆ ನೋಡಿಕೊಳ್ಳುತ್ತದೆ. ಸೈಬರ್ ಖದೀಮರಿಗೂ ಇದು ಕಠಿಣ ಸವಾಲೆಸೆಯುತ್ತದೆ.

### ಆಫ್‌ಲೈನ್ ಡಿವೈಸ್ ಲಾಕ್

ಸ್ಮಾರ್ಟ್‌ಫೋನ್ ಕಳ್ಳರು ಕದ್ದ ಫೋನ್‌ಗಳನ್ನು ಅತ್ಯಾಧುನಿಕ ಮಾರ್ಗ ಅನುಸರಿಸಿ ಅದರಲ್ಲಿನ ಮಾಹಿತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ ಮತ್ತು ಬೇರೊಂದು ಐಎಂಇಐ ನಂಬರ್ ಅಳವಡಿಸಿಕೊಂಡು ಬಳಸುತ್ತಾರೆ ಅಥವಾ ಕಡಿಮೆ ಬೆಲೆಗೆ ಮಾರಿಬಿಡುತ್ತಾರೆ. ಈ ಸಲುವಾಗಿ ಘಟನೆ ಸಂಭವಿಸಿದ ಕೂಡಲೇ ಫೋನ್ ಅನ್ನು ಆಫ್‌ಲೈನ್ ಮಾಡುತ್ತಾರೆ. ಇದನ್ನು ತಡೆಯುವ ಸಲುವಾಗಿ ಗೂಗಲ್ ಆಫ್‌ಲೈನ್ ಡಿವೈಸ್ ಲಾಕ್ ಪರಿಚಯಿಸಿದ್ದು, ನಿಮ್ಮ ಮೊಬೈಲ್ ಬೇರೆಯವರ ಕೈಯಲ್ಲಿ (ರಾಂಗ್ ಹ್ಯಾಂಡ್) ಇರುವುದನ್ನೂ ಈ ಫೀಚರ್ ಗುರುತಿಸುತ್ತದೆ. ಲಾಗಿನ್ ಪ್ರಯತ್ನ ಹಲವು ಬಾರಿ ವಿಫಲವಾದ ಸಂದರ್ಭದಲ್ಲಿಯೂ ಸ್ಕ್ರೀನ್ ಲಾಕ್ ಆಗುತ್ತದೆ.

### ರಿಮೋಟ್ ಲಾಕ್

ಬೇರೆ ಸಾಧನದ ನೆರವಿನಿಂದ ಕೇವಲ ಮೊಬೈಲ್ ಫೋನ್ ಸಂಖ್ಯೆ ಬಳಸಿ ಸ್ಮಾರ್ಟ್‌ಫೋನ್‌ನ ರಿಮೋಟ್‌ಲಾಕ್ ಮಾಡಬಹುದು. ಇಂತಹ ಸಂದರ್ಭದಲ್ಲಿ ಲಾಗಿನ್ ಆಗಲು ಭದ್ರತಾ ಪ್ರಶ್ನೆಗಳನ್ನು ಕೇಳುತ್ತದೆ. ಜೊತೆಗೆ ಫೈಂಡ್ ಮೈ ಡಿವೈಸ್ ಆಯ್ಕೆ ಮೂಲಕ ಖಾತೆಯ ವಿವರವನ್ನು ರಿಕವರಿ ಸಹ ಮಾಡಿಕೊಳ್ಳಬಹುದು. ■

## ಉದ್ದವಾದ 'ಶಾರ್ಟ್ಸ್'

ಕಂಟೆಂಟ್ ಕ್ರಿಯೇಟರ್‌ಗಳ ಸ್ವರ್ಗತಾಣವಾದ 'ಯೂಟ್ಯೂಬ್'ನಲ್ಲಿ ಹೊಸ ಫೀಚರ್ ಲಭ್ಯವಾಗಿದ್ದು, ಇದು ಈಗಿದ್ದ 'ಶಾರ್ಟ್ಸ್' ಮಿತಿಯನ್ನು ಏರಿಸಿದೆ.

ಇದುವರೆಗೆ ಯೂಟ್ಯೂಬ್‌ನ ಶಾರ್ಟ್ಸ್ ವಿಭಾಗದಲ್ಲಿ ಇಷ್ಟು ದಿನ ನೀವು ಕೇವಲ 60 ಸೆಕೆಂಡುಗಳ ವಿಡಿಯೊವನ್ನಷ್ಟೇ ಅಪ್‌ಲೋಡ್ ಮಾಡಲು ಅವಕಾಶವಿತ್ತು. ಈ ಮಿತಿ ಈಗ ಮೂರು ನಿಮಿಷಕ್ಕೆ ಏರಿಕೆಯಾಗಿದೆ. ಶಾರ್ಟ್ಸ್ ವಿಭಾಗವನ್ನು ಯೂಟ್ಯೂಬ್ ಸ್ಟೋರಿ ಅಂತಲೂ ಕರೆಯಲಾಗುತ್ತದೆ. ಕಂಟೆಂಟ್ ಕ್ರಿಯೇಟ್ ಮಾಡುವವರು ಉದ್ದನೆಯ (ಲೆಂತ್) ಶಾರ್ಟ್ಸ್‌ಗಳನ್ನು ಅಪ್ಲೋಡ್ ಮಾಡುವ ಅವಕಾಶ ಒದಗಿಸುವಂತೆ ವಿನಂತಿಸಿಕೊಂಡಿದ್ದರು.

ಭಾರತ ಸೇರಿದಂತೆ ಕೆಲ ದೇಶಗಳಲ್ಲಿ ನಿಷೇಧಕ್ಕೆ ಒಳಗಾಗಿದ್ದ ಟಿಕ್‌ಟಾಕ್, ಜಗತ್ತಿನ 160 ದೇಶಗಳಲ್ಲಿ ಬಳಕೆಯಲ್ಲಿದೆ. ಪ್ರಾರಂಭದಲ್ಲಿ ಮೂರು ನಿಮಿಷಗಳ ವಿಡಿಯೊ ಅಪ್‌ಲೋಡ್‌ಗೆ ಅನುವು ಮಾಡಿಕೊಟ್ಟಿದ್ದ ಆ್ಯಪ್, ಅದನ್ನೀಗ ಹತ್ತು ನಿಮಿಷಗಳಿಗೆ ಹೆಚ್ಚಿಸಿದೆ. ಅಂತೆಯೇ ಇನ್‌ಸ್ಟಾಗ್ರಾಂನ ರೀಲ್ಸ್‌ನಲ್ಲಿ 90 ಸೆಕೆಂಡ್‌ಗಳ ವಿಡಿಯೊ ಅಪ್‌ಲೋಡ್ ಮಾಡಬಹುದು. ಟಿಕ್‌ಟಾಕ್ ಮತ್ತು ರೀಲ್ಸ್‌ಗಿಂತ ಕಡಿಮೆ ನಿಮಿಷದ ವಿಡಿಯೊ ಮಿತಿ ಹೊಂದಿದ್ದ ಶಾರ್ಟ್ಸ್ ಈಗ ತನ್ನ ಮಿತಿ ಹೆಚ್ಚಿಸಿಕೊಂಡಿದೆ. ಇದು ಕ್ರಾಸ್‌ಪೋಸ್ಟ್ ಮಾಡಲು ಅನುವು ಮಾಡಿಕೊಡುತ್ತದೆ.

ಹೆಚ್ಚಿದ ವಿಡಿಯೊ ಮಿತಿಗಳ ಜೊತೆಗೆ, ಯೂಟ್ಯೂಬ್ ಕಿರುಚಿತ್ರಗಳ ಫೀಡ್‌ನಲ್ಲಿ ಕಾಮೆಂಟ್‌ಗಳ ಪೂರ್ವವೀಕ್ಷಣೆಯನ್ನೂ ಪರಿಚಯಿಸುತ್ತಿದೆ. ಶಾರ್ಟ್ಸ್ ಕ್ಯಾಮೆರಾದಿಂದ ಯೂಟ್ಯೂಬ್‌ನಲ್ಲಿ ಕ್ಲಿಪ್‌ಗಳನ್ನು ಎಳೆಯಲು, ರೀಮಿಕ್ಸ್ ಕ್ಲಿಪ್‌ಗಳನ್ನು ರಚಿಸುವ ಅವಕಾಶ ಕಲ್ಪಿಸಲು ಕಂಪನಿ ಮುಂದಾಗಿದೆ. ■